

**ಕಾವ್ಯಾ ಕಡಮೆ**
ಕಲೆ: ಮದನ್ ಸಿ.ಪಿ.

# ನೂರ್ಮಾ

ಆತನ ಗುಣಕ್ಕನುಸಾರ
ಪ್ರತಿಯೊಬ್ಬನಲೂ ಪ್ರಾಣಿಯೊಂದು
ಅಡಗಿ ಕುಳಿತಿರುತ್ತದೆ.
—ಲೋಕೋಕ್ತಿ

Two girls there are: within the house
One sits; the other, without.
–Sylvia Plath

ಬೀದಿ ದೀಪದ ಸುಟ್ಟ ಗಾಯವ
ನೇವರಿಸುವ ಈ ರಾತ್ರಿ
ಅವಳು ಸಿಗಬೇಕು – ನನ್ನ ನೂರ್ಮಾ
ಮಗ್ಗುಲು ಬದಲಿಸುವ ಮುನ್ನವೇ
ಮಡಿಲು ತುಂಬಬೇಕು

ಸ್ವಪ್ನದಲೇ ಪಂಜು ಬೀಸಿ
ದಿಗ್ಗನೆದ್ದು ಕೂಡುವ ಮುದ್ದು ಬೆಕ್ಕು ನೂರ್ಮಾ
ಮೊನ್ನೆಯಿಂದ ಮಾಯವಾಗಿದ್ದಾಳೆ
ಕಾಲಿಗೆ ತೊಡರುತಿದೆ
ಆಕೆ ಕೊಡವಿ ಹೋದ ಹತ್ತಿಯ ರೋಮ

ಬಾಗಿಲಲ್ಲಿಟ್ಟ ಅವಳಿಷ್ಟದ ಗುಲಾಬಿ ಸಾಲ್ಮನ್
ತಿರುಗುತ್ತಿದೆ ಕಂದು ಬಣ್ಣಕೆ
ಮುತ್ತಿಗೆ ಹಾಕಬೇಕಿತ್ತು ಇನ್ನೇನು
ಇರುವೆಗಳು – ಅವೂ ಕಾಣಿಸುತ್ತಿಲ್ಲ
ಶಿಸ್ತಿನ ಅವು ಹೋಗಿರಬೇಕು
ಪಥದ ಪಹರೆ ಕಾಯಲು



